ಅನುಬಂಧ 2

ಮಂಡಳಿಯ ದಿನಾಂಕ 28-2-2003 ರವರೆಗಿನ ಸಾಲಗಳ ವಿವರಗಳು

| ಕ್ರಮ ಸಂಖ್ಯೆ | ವಿವರಗಳು | ಮೊತ್ತ (ಲಕ್ಷ ರೂ. ಗಳಲ್ಲಿ) |
|---|---|---|
| 1. | ಸಿಂಡಿಕೇಟ್ ಬ್ಯಾಂಕ್ ಓವರ್ ಡ್ರಾಫ್ಟ್ | 95-00 |
| 2. | ಸಿಂಡಿಕೇಟ್ ಬ್ಯಾಂಕ್ ವರ್ಕಿಂಗ್ ಕ್ಯಾಪಿಟಲ್ ಸಾಲ | 9-00 |
| 3. | ಭಟ್ಕಳ್ ಅರ್ಬನ್ ಕೋ-ಆಪರೇಟೀವ್ ಬ್ಯಾಂಕ್ | 30-00 |
| 4. | ಸರ್ಕಾರದಿಂದ ಪಡೆದ ಸಾಲ | 75-00 |
| 5. | ತುಂಗಭದ್ರಾ ಫಿಶ್‌ನೆಟ್ ಮೇಕಿಂಗ್ ಪ್ಲಾಂಟ್ ಸಾಲ | 38.17 |
| | ಒಟ್ಟು | 247.17 |

## ಸಣ್ಣ ಕೈಗಾರಿಕೆಗಳಿಗೆ ಮೂಲಭೂತ ಸೌಕರ್ಯಗಳು

2126 (2298) ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು): ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ;

ಆ) ಈಗಾಗಲೇ ಮುಚ್ಚಿರುವ ರೋಗಗ್ರಸ್ಥ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ;

ಇ) ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸರ್ಕಾರವು ಈ ಕೈಗಾರಿಕೆಗಳಿಗೆ ಒದಗಿಸುವ ವಿದ್ಯುತ್ ದರವನ್ನು ಕಡಿಮೆಗೊಳಿಸಲು ಸಾಧ್ಯವಿಲ್ಲವೇ; ಇಲ್ಲದಿದಲ್ಲಿ, ಕಾರಣವೇನು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು)

ಅ) ರಾಜ್ಯದ ಕೈಗಾರಿಕಾ ನೀತಿ 2001-06 ರಂತೆ ಕೈಗಾರಿಕೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಒತ್ತು ನೀಡಲಾಗಿದೆ. ಮಾಲೂರು, ಬಾಗಲಕೋಟೆ, ಬೆಳಗಾವಿ, ಹಿರಿಯೂರು, ಜೀವರ್ಗಿ, ದಕ್ಷಿಣ ಕನ್ನಡ ಮತ್ತು ಮದ್ದೂರು ಇಲ್ಲಿ 7 ಕೃಷಿ ಆಹಾರ ಸಂಸ್ಕರಣ ಪಾರ್ಕುಗಳನ್ನು ಅಭಿವೃದ್ಧಿಪಡಿಸಲಾಗುವುದು. ದೊಡ್ಡಬಳ್ಳಾಪುರ ಮತ್ತು ಬಳ್ಳಾರಿಯಲ್ಲಿ ಅಪೆರೆಲ್ ಎಕ್ಸ್‌ಪೋರ್ಟ್ ಪಾರ್ಕ್, ಹಾಸನದಲ್ಲಿ ವಿಶೇಷ ಆರ್ಥಿಕ ವಲಯ, ಮಂಗಳೂರಿನಲ್ಲಿ ಕರಾವಳಿ ವಿಶೇಷ ಆರ್ಥಿಕ ವಲಯ ಮತ್ತು ಎಕ್ಸ್‌ಪೋರ್ಟ್ ಪ್ರೋಮೋಷನ್ ಇಂಡಸ್ಟ್ರಿಯಲ್ ಪಾರ್ಕ್, ಬಿಡದಿ, ಶಿವಮೊಗ್ಗ ಮತ್ತು ಧಾರವಾಡದಲ್ಲಿ ಆಟೋ ಪಾರ್ಕ್‌ಗಳನ್ನು ಅಭಿವೃದ್ಧಿ ಪಡಿಸಲಾಗುವುದು.

ಶೇ. 50 ಕ್ಕಿಂತ ಜಾಸ್ತಿ ಕೈಗಾರಿಕಾ ಬಳಕೆ ಇರುವ 11 ಕೆ.ವಿ. ಫೀಡರ್‌ಗಳನ್ನು ಪ್ರತ್ಯೇಕ ಕೈಗಾರಿಕಾ ಫೀಡರ್ / ಎಕ್ಸ್‌ಪ್ರೆಸ್ ಫೀಡರ್‌ಗಳನ್ನಾಗಿ ಪರಿವರ್ತಿಸುವುದು.

ಉದ್ಯಮಶೀಲರಿಗೆ ಕೈಗಾರಿಕಾ ಪ್ರದೇಶದ ಬೆಲೆ ದುಬಾರಿಯಾಗದಂತೆ ಖಾತರಿ ಪಡಿಸಲು ಲಭ್ಯವಿರುವ ಎಲ್ಲಾ ಸರ್ಕಾರಿ ಜಮೀನನ್ನು ಕೆ.ಐ.ಎ.ಡಿ.ಬಿ. ಗೆ ಉಚಿತವಾಗಿ ವರ್ಗಾವಣೆ ಮಾಡುವುದು.

ಅ) ಮುಚ್ಚಿರುವ ಕೈಗಾರಿಕೆಗಳನ್ನು ಪುನಃಶ್ಚೇತನಗೊಳಿಸುವ ಬಗ್ಗೆ ಯಾವುದೇ ಕಾರ್ಯಕ್ರಮ ಇರುವುದಿಲ್ಲ. ಆದರೆ, ಪ್ರವರ್ತಕರು ಮುಂದೆ ಬಂದಲ್ಲಿ ಅರ್ಹವಿದ್ದ ರೋಗಗ್ರಸ್ಥ, ಕೈಗಾರಿಕೆಗಳ ಪುನಃಶ್ಚೇತನಕ್ಕಾಗಿ ಪ್ರತ್ಯೇಕ ರೋಗಗ್ರಸ್ಥ ಪುನಃಶ್ಚೇತನ ಕೈಗಾರಿಕಾ ನೀತಿಯಂತೆ ರಿಯಾಯಿತಿಗಳನ್ನು ನೀಡಲಾಗುವುದು.

ಇ) ಈ ಬಗ್ಗೆ ಸದ್ಯಕ್ಕೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆಗಳಿರುವುದಿಲ್ಲ.

**ಸಣ್ಣ ಕೈಗಾರಿಕೆಗಳಿಗೆ ಬಿಡಿಗಡೆ ಮಾಡಿದ ಸಹಾಯಧನ**

2127 (2299) ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು): ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರದಿಂದ ಸಣ್ಣ ಕೈಗಾರಿಕೆಗಳಿಗೆ ಬಿಡುಗಡೆ ಮಾಡಲು ಬಾಕಿ ಇರುವ ಸಹಾಯಧನ ಎಷ್ಟು;

ಆ) ಈ ಮೊತ್ತವನ್ನು ಸಣ್ಣ ಕೈಗಾರಿಕೆಗಳಿಗೆ ಬಿಡುಗಡೆ ಮಾಡದೇ ಇರಲು ಕಾರಣಗಳೇನು? ಯಾವಾಗ ಬಿಡುಗಡೆ ಮಾಡಲಾಗುವುದು;

ಇ) ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸದೇ ಇದ್ದ ಕಾರಣ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳು ಮುಚ್ಚಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು)

ಅ) ದಿನಾಂಕ 31-01-2003ರ ಅಂತ್ಯಕ್ಕೆ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ರೂ. 400.67 ಕೋಟಿಗಳು ಸಹಾಯಧನ ನೀಡಲು ಬಾಕಿ ಇರುತ್ತದೆ.

ಆ) ಆಯವ್ಯಯದಲ್ಲಿ ಒದಗಿಸಿರುವ ಅನುದಾನವು ಸಹಾಯಧನ ಮಂಜೂರಾತಿಗಿಂತಲೂ ಕಡಿಮೆ ಇರುವುದರಿಂದ ಬಾಕಿ ಹಣವನ್ನು ನೀಡಲು ಸಾಧ್ಯವಾಗುತ್ತಿಲ್ಲ. ಆಯವ್ಯಯದಲ್ಲಿ ಹಣವನ್ನು ಒದಗಿಸಲು ಆದಷ್ಟು ಪ್ರಯತ್ನ ಮಾಡಲಾಗುತ್ತಿದೆ.

ಇ) ಮೂಲಭೂತ ಸೌಕರ್ಯಗಳನ್ನು ಒದಗಿಸದೇ ಇದ್ದ ಒಂದೇ ಕಾರಣದಿಂದ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳು ಮುಚ್ಚಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಸಣ್ಣ ಕೈಗಾರಿಕೆಗಳು ರೋಗಗ್ರಸ್ಥವಾಗಿ ಮುಚ್ಚಲು ಹಲವಾರು ಕಾರಣಗಳಿವೆ. ಅವುಗಳಲ್ಲಿ ಪ್ರಮುಖ ಕಾರಣಗಳು ಕೆಳಕಂಡಂತಿವೆ.

1. ಉದಾರೀಕರಣ
2. ಜಾಗತೀಕರಣ
3. ಬಹುರಾಷ್ಟ್ರೀಯ ಕಂಪನಿಗಳ ಪೈಪೋಟಿ
4. ವಿಳಂಬ ಪಾವತಿ
5. ವಿದ್ಯುತ್ ಸಮಸ್ಯೆ
6. ದುಡಿಮೆ ಬಂಡವಾಳದ ಸಮಸ್ಯೆ
7. ಮಾರುಕಟ್ಟೆ ಸಮಸ್ಯೆ
8. ಮಾಲೀಕರ ವಿವಾದಗಳು